# ಕರ್ನಾಟಕ ಸರ್ಕಾರ

## ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಬೆಂಗಳೂರು ಇವರು ಹೊರಡಿಸಿರುವ ನಡವಳಿಗಳು

ವಿಷಯ: ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ 2368/2011 ಪ್ರಕರಣದಲ್ಲಿ ದಿನಾಂಕ: 09-02-2017ರ ತೀರ್ಪಿನ ಹಿನ್ನೆಲೆಯಲ್ಲಿ ರಕ್ಷಕ-ಅಡುಗೆಯವರ ವೃಂದದ ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸುವ ಬಗ್ಗೆ .

ಉಲ್ಲೇಖ:

1 ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಸೇವಾನಿಯಮ-1), ಸಿಆಸುಇ/ 182/ ಸೇನೆನಿ/2011,ದಿನಾಂಕ: 06.05.2017.

2. ಗ್ರೂಪ್ "ಡಿ" ವೃಂದದಿಂದ ರಕ್ಷಕರು-ಅಡುಗೆಯವರು ವೃಂದಕ್ಕೆ ಮತ್ತು ರಕ್ಷಕರು-ಅಡುಗೆಯವರು ವೃಂದದಿಂದ ದ್ವಿತಿಯ ದರ್ಜೆ ಸಹಾಯಕರು ವೃಂದಕ್ಕೆ ಮುಂಬಡ್ತಿ ಆದೇಶ ದಿನಾಂಕ:08.11.1982, 08.05.1986, 04.05.1987, 27.07.1987, 21.10.1989, 20.04.1991, 21.05.1991, 16.11.1996, 25.11.1996, 04.03.1997, 04.04.1997, 27.04.2000 ಮತ್ತು 30.05.2000.

3. ರಕ್ಷಕರು:ಅಡುಗೆಯವರು ವೃಂದದ ದಿನಾಂಕ 01.01.2005 ರಂದಿನಂತಿನ ಅಂತಿಮ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ: ನಿಮಮಇ/ಜೇಷ್ಠತೆ/ರಕ್ಷಕರು:ಅಡುಗೆ-21/05-06 ದಿನಾಂಕ: 29.03.2006.

4 ರಕ್ಷಕರು:ಅಡುಗೆಯವರು ವೃಂದದ ದಿನಾಂಕ 01.01.2006 ರಂದಿನಂತಿನ ಅಂತಿಮ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ: ನಿಮಮಇ/ಜೇಷ್ಠತೆ/ರಕ್ಷಕರು:ಅಡುಗೆ-15/06-07 ದಿನಾಂಕ: 15.03.2007.

5. ರಕ್ಷಕರು:ಅಡುಗೆಯವರು ವೃಂದದ ದಿನಾಂಕ 01.01.2013 ರಂದಿನಂತಿನ ಅಂತಿಮ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ: ನಿಮಮಇ/ಜೇಷ್ಠತೆ/ರಕ್ಷಕರು:ಅಡುಗೆ-7/2013-14 ದಿನಾಂಕ: 26.09.2014.

6. ರಕ್ಷಕರು:ಅಡುಗೆಯವರು ವೃಂದದ ದಿನಾಂಕ 01.01.2015 ರಂದಿನಂತಿನ ಅಂತಿಮ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ: ಮಮಅಇ/ಜೇಷ್ಠತೆ/ರಕ್ಷಕರು:ಅಡುಗೆ-17/2015-16 ದಿನಾಂಕ: 22.07.2015

7. ರಕ್ಷಕರು:ಅಡುಗೆಯವರು ವೃಂದದ ದಿನಾಂಕ 01.01.2016 ರಂದಿನಂತಿನ ಅಂತಿಮ ಜೇಷ್ಠತಾ ಪಟ್ಟಿ ಆದೇಶ ಸಂಖ್ಯೆ: ಮಮಅಇ/ಜೇಷ್ಠತೆ/ರಕ್ಷಕರು:ಅಡುಗೆ-12/2016-17 ದಿನಾಂಕ: 02.12.2016

ಪ್ರಸ್ತಾವನೆ: ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ 2368/2011 ಬಿ.ಕೆ. ಪವಿತ್ರ ಮತ್ತು ಇತರರ ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ದಿನಾಂಕ:09.02.2017 ರಂದು ನೀಡಿರುವ ತೀರ್ಪಿನಲ್ಲಿ ರಾಜ್ಯ ಸರ್ಕಾರದ ನಾಗರೀಕ ಸೇವೆಗಳನ್ನು "Karnataka Determination of Seniority of Govt servants promoted on the basis of Reservation Act 2002" ರ ಸೆಕ್ಷನ್ 3 ಮತ್ತು 4ನ್ನು ಸಂವಿಧಾನದ ಅನುಚ್ಛೇಧ 14 ಮತ್ತು 16 ನ್ನು ಅಧಿಕಾರಾತೀತ (ultra vires) ಎಂದು ಆದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಉಲ್ಲೇಖ(1)ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆದೇಶದಲ್ಲಿ ಸರ್ವೋಚ್ಛ ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ದಿನಾಂಕ: 27.04.1978 ರಿಂದ 01.01.2017 ರವರೆಗೆ ನೀಡಿರುವ ಮುಂಬಡ್ತಿಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ನೌಕರರಿಗೆ ಮೀಸಲಾತಿ ಅನುಸರಿಸಿರುವ ಅಧಿಕಾರಿಗಳ/ನೌಕರರ ಜೇಷ್ಠತಾ ಪಟ್ಟಿಗಳನ್ನು ಪುನರ್‌ಪರಿಶೀಲಿಸಲು ಆದೇಶಿಸಲಾಗಿದೆ. ಅದರಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ದಿನಾಂಕ: 27.04.1978 ರಿಂದ 01.01.2017 ರವರೆಗೆ ಹೊರಡಿಸಲಾಗಿರುವ ಅಧಿಕಾರಿ/ನೌಕರರ ಜೇಷ್ಠತೆ ಪುನರ್ ಪರಿಶೀಲಿಸಿ, ಪರಿಷ್ಕೃತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸಬೇಕಿದೆ.